# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ವಿಜ್ಞಾನ ಭವನ, ನಂ. 24/2 ಮತ್ತು 24/3 (ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ), 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

**ದೂರವಾಣಿ/ಫ್ಯಾಕ್ಸ್ 080-26711160, ಮೊಬೈಲ್ : 9880405181, Email : ksta.gok@gmail.com**


---

## ಮಾಹಿತಿ ಹಕ್ಕು ಕಾಯಿದೆ 2005

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಕಾಯಿದೆಯ 2005 ಕಲಂ 4 (1) (ಎ)ಯ ಪ್ರಕಾರ ಸೂಚಿಪಟ್ಟಿಯನ್ನು ನಾಗರೀಕರಿಗೆ ನೀಡುವ ಸಲುವಾಗಿ ಪ್ರಕಟಿಸಲಾಗಿದೆ.

### ಸೂಚಿ ಪಟ್ಟಿ

1. ಅಕಾಡೆಮಿಯ ಸ್ಥಾಪನೆ – ಸರ್ಕಾರಿ ಆದೇಶ
2. ಅಕಾಡೆಮಿಯ ಸದಸ್ಯರ ನಾಮನಿರ್ದೇಶನ – ಸರ್ಕಾರಿ ಆದೇಶ
3. ಅಕಾಡೆಮಿಯ ಪುನರ್ ರಚನೆ – ಸರ್ಕಾರಿ ಆದೇಶ
4. ಅಕಾಡೆಮಿಯನ್ನು ಸ್ವಾಯತ್ತ ಸಂಸ್ಥೆಯಾಗಿ ನೊಂದಾವಣೆ – ನೊಂದಾವಣೆ ಪ್ರಮಾಣ ಪತ್ರ
5. ಅಧ್ಯಕ್ಷರು ಮತ್ತು ಸದಸ್ಯರ ವಿವರ
6. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರ
7. ಮಾಹಿತಿ ಹಕ್ಕು ಕಾಯಿದೆ 2005 ಕಂಡಿಕೆ 4(1) ಬಿ ಯಂತೆ ವಿವರಗಳು
8. ಅಕಾಡೆಮಿಯ ಕಛೇರಿ ವಿಳಾಸ, ದೂರವಾಣಿ, ಅಂತರ್ಜಾಲ, ಇ-ಮೇಲ್ ವಿವರಗಳು
9. ಕಾರ್ಯಕ್ರಮಗಳ ವಿವರ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ವಿಜ್ಞಾನ ಭವನ, ನಂ. 24/2 ಮತ್ತು 24/3 (ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ), 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

**ದೂರವಾಣಿ/ಫ್ಯಾಕ್ಸ್ 080-26711160, ಮೊಬೈಲ್ : 9880405181, Email : ksta.gok@gmail.com**

## ಮಾಹಿತಿ ಹಕ್ಕು ಕಾಯಿದೆ 2005

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಕಾಯಿದೆಯ ಕಲಂ 4 (1) (ಬಿ)ಯ ಪ್ರಕಾರ ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಾಗರೀಕರಿಗೆ ನೀಡುವ ಸಲುವಾಗಿ ಪ್ರಕಟಿಸಲಾಗಿದೆ.

### 1. ಸಂಸ್ಥೆಯ ಕಾರ್ಯನಿರ್ವಹಣೆ ಮತ್ತು ಕರ್ತವ್ಯಗಳ ವಿವರ :

ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಮತ್ತು ವಿಜ್ಞಾನವನ್ನು ಸಮಾಜದ ವಿವಿಧ ವರ್ಗಗಳ ಜನರಲ್ಲಿ ಜನಪ್ರಿಯಗೊಳಿಸಲು, ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ 2005ರ ಜುಲೈ 30 ರಂದು ರಾಜ್ಯ ಸರ್ಕಾರವು (ಸರ್ಕಾರಿ ಆದೇಶ ಸಂಖ್ಯೆ : ವಿಯಇ ವಿತ್ರಮ 2005ರ ಅನ್ವಯ) ಸ್ಥಾಪಿಸಿದೆ. ಅಕಾಡೆಮಿಯು 2005ರ ಸೆಪ್ಟಂಬರ್ 1 ರಂದು ವಿಧ್ಯುಕ್ತವಾಗಿ ಉದ್ಘಾಟನೆಗೊಂಡು ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸೊಸೈಟಿಯನ್ನಾಗಿ ಕರ್ನಾಟಕ ನೋಂದಾವಣಿ ಅಧಿನಿಯಮ 1960ರ ಅನ್ವಯ 2009ರ ಏಪ್ರಿಲ್ 06 ರಂದು ನೋಂದಾಯಿಸಲಾಗಿದೆ.

ಅಕಾಡೆಮಿಯು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳು ಮತ್ತು ಅಭಿವೃದ್ಧಿಗಳನ್ನು ಸಾಮಾನ್ಯ ಜನರ ಜ್ಞಾನ ಪರಿಧಿಗೆ ನಿಲುಕುವಂತೆ ಮಾಡುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತಿದೆ. ಈ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳನ್ನು ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಪ್ರೊ.ಯು.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡು ಬರಲಾಗುತ್ತಿದೆ. ಹೆಸರಾಂತ ವಿಜ್ಞಾನಿಗಳು, ಹಿರಿಯ ಶಿಕ್ಷಣ ತಜ್ಞರು, ಸರ್ಕಾರದ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳನ್ನೊಳಗೊಂಡ 21 ಮಹನೀಯರು ಅಕಾಡೆಮಿಯ ಸದಸ್ಯರಾಗಿರುವರು.

### ಅ) ಕೇಂದ್ರದ ಆಡಳತ ನಿರ್ವಹಣೆಯನ್ನು ಸಂಕ್ಷಿಪ್ತವಾಗಿ ಈ ಕೆಳಗೆ ನೀಡಲಾಗಿದೆ.

ಸಂಘ – ನಿಯಮಾವಳಿಯಲ್ಲಿ ವಿವರಿಸಿರುವಂತೆ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರ ಸಭೆಗಳಲ್ಲಿ ತೆಗೆದು ಕೊಳ್ಳುವ ನಿರ್ಣಯಗಳಂತೆ ಆಡಳಿತ ನಿರ್ವಹಣೆಯನ್ನು ನಡೆಸಲಾಗುತ್ತದೆ. ಅಕಾಡೆಮಿಯ ದೈನಂದಿನ ಚಟುವಟಿಕೆಗಳನ್ನು ಸದಸ್ಯ ಕಾರ್ಯದರ್ಶಿಗಳ ಮಾರ್ಗದರ್ಶನದಂತೆ ನಡೆಸಲಾಗುತ್ತದೆ.

### ಆ) ಅಕಾಡೆಮಿಯ ಧ್ಯೇಯೋದ್ದೇಶಗಳು

- ಜನಸಾಮಾನ್ಯರಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಕರ್ನಾಟಕದ ಜನತೆಯಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವುದು ಹಾಗೂ ಅವರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪ್ರಸರಿಸುವುದು.
- ವಿಜ್ಞಾನ ಕಲಿಕೆ ಮತ್ತು ಬೋಧನಾ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಪ್ರೌಢಶಾಲೆಗಳಿಗೆ ವಿತರಿಸುವುದು.
- ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಿಯತಕಾಲಿಕೆ ಪ್ರಕಟಣೆಗಳನ್ನು ಹೊರತರುವುದು.

- ಮೂಲ ವಿಜ್ಞಾನದ ವ್ಯಾಸಂಗಕ್ಕೆ ಶಿಷ್ಯವೇತನ ಹಾಗೂ ಉನ್ನತ ವ್ಯಾಸಂಗ ಮತ್ತು ಸಂಶೋಧನೆ ಕೈಗೊಳ್ಳಲು ಉತ್ತೇಜನ.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಮುಂಚೂಣಿ ವಿಷಯಗಳು ಮತ್ತು ಅವುಗಳಲ್ಲಿರುವ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಷ್ಟ್ರೀಯ ಮತ್ತು ಜಾಗತಿಕ ಮಹತ್ವದ ದಿನಗಳನ್ನು ಆಚರಿಸುವುದು ಮತ್ತು ಆ ಮೂಲಕ ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವುದು
- ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಕ್ಕೆ ಸಂಬಂಧಿಸಿದ ಸಮಾವೇಶ, ವಿಚಾರ ಸಂಕಿರಣ, ಕಾರ್ಯಾಗಾರ, ವಸ್ತುಪ್ರದರ್ಶನ, ಮೇಳ, ಬೀದಿನಾಟಕ, ಜಾಥಾ, ಮುಂತಾದವುಗಳನ್ನು ಪ್ರೋತ್ಸಾಹಿಸುವುದು.
- ಜೀವಮಾನ ಸಾಧನೆ ಮತ್ತು ಶ್ರೇಷ್ಠ ಲೇಖಕ ಪ್ರಶಸ್ತಿಗಳನ್ನು ನೀಡುವುದು.
- ವಿಜ್ಞಾನ ವಿಷಯದಲ್ಲಿ ಶಿಕ್ಷಕರಿಗೆ ಮತ್ತು ಅಧ್ಯಾಪಕರಿಗೆ ಪುನಶ್ಚೇತನಾ ಶಿಬಿರ ಮತ್ತು ಕಾರ್ಯಾಗಾರಗಳನ್ನು ಏರ್ಪಡಿಸುವುದು
- ವಿಜ್ಞಾನ ಸಂವಹನ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು
- ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಯ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.

**2. ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯ :**

ಅಕಾಡೆಮಿಯ ಆಡಳಿತ ಕಾರ್ಯಭಾರ ಮತ್ತು ಕಾರ್ಯಕ್ರಮಗಳ ಅನುಷ್ಠಾನವನ್ನು ಸರ್ವ ಸದಸ್ಯರ ಸಭೆ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯಗಳಂತೆ ಅಕಾಡೆಮಿಯ ಪದನಿಮಿತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಯಾಗಿರುವ ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರು ನಿರ್ವಹಿಸುವರು, ಆದಾಗ್ಯೂ ಕಾರ್ಯಕಾರಿ ಸಮಿತಿಯ ಮಾರ್ಗದರ್ಶನದಂತೆ ಆಡಳಿತ ನಿರ್ವಹಣೆಯನ್ನು ನಡೆಸಲಾಗುತ್ತಿದೆ.

ಆಡಳಿತಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಆಡಳಿತ ಮತ್ತು ಲೆಕ್ಕಪತ್ರ ನಿರ್ವಹಣೆಯಲ್ಲಿ ಹಾಗೂ ವೈಜ್ಞಾನಿಕಾಧಿಕಾರಿಗಳು ಯೋಜನೆಗಳ ಅನುಷ್ಠಾನದ ಸಂಯೋಜನೆ, ಪರಿವೀಕ್ಷಣೆ ಮತ್ತು ವರದಿ ತಯಾರಿಕೆಯಲ್ಲಿ ಅಕಾಡೆಮಿಯ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳಿಗೆ ನೆರವು ನೀಡುತ್ತಿದ್ದಾರೆ.

**3. ನಿರ್ಣಯ ಕೈಗೂಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯವಿಧಾನ, ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ.**

ಆಡಳಿತ ಮತ್ತು ಹಣಕಾಸು ನಿರ್ವಹಣೆಯನ್ನು ಅಕಾಡೆಮಿ ಕಾರ್ಯಕಾರಿ ಸಮಿತಿಯ ನಿರ್ಣಯ ಹಾಗೂ ಮಾರ್ಗದರ್ಶನದಂತೆ ನಡೆಸಲಾಗುವುದು. ಆದಾಗ್ಯೂ, ಅಕಾಡೆಮಿಯ ದಿನನಿತ್ಯದ ಕಾರ್ಯಚಟುವಟಿಕೆಗಳ ಆಡಳಿತ ಮತ್ತು ಯೋಜನೆಯ ಅನುಷ್ಠಾನವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಗಳು ಸಂಘ ನಿಯಮಾವಳಿಯಲ್ಲಿ ವಿವರಿಸಿರುವ ನಿಬಂಧನೆಗಳಂತೆ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ನಿರ್ವಹಿಸುವರು.

**4. ಕರ್ತವ್ಯ ನಿರ್ವಹಣೆಗೆ ನಿಗದಿಪಡಿಸಿರುವ ನಿಯಮಗಳು :**

ನಿಯಮ ನಿಬಂಧನೆಗಳನ್ನು ಸಂಘ ನಿಯಮಾವಳಿಯಲ್ಲಿ ವಿವರಿಸಲಾಗಿದೆ ಹಾಗೂ ಕಾರ್ಯಕಾರಿ ಸಮಿತಿ ಮತ್ತು ಸರ್ವಸದಸ್ಯರ ಸಭೆಗಳ ನಿರ್ಣಯಗಳಂತೆ ಅಕಾಡೆಮಿಯಲ್ಲಿ ಕರ್ತವ್ಯ ನಿರ್ವಹಿಸಲಾಗುವುದು.

**5. ಕೇಂದ್ರದ ಸ್ವಾಧೀನದಲ್ಲಿರುವ ಮತ್ತು ಅದರ ಸಿಬ್ಬಂದಿಗಳು ಕರ್ತವ್ಯ ನಿರ್ವಹಣೆಯಲ್ಲಿ ಬಳಸುತ್ತಿರುವ ನಿಯಮ ನಿಬಂಧನೆ, ಆದೇಶಗಳು, ಕೈಪಿಡಿ ಮತ್ತು ದಾಖಲೆಗಳು :**

ಸಂಘ ನಿಯಮಾವಳಿ ಅಲ್ಲದೇ, ಪ್ರೊ.ಯು.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯುವ ಸರ್ವಸದಸ್ಯರ ಸಭೆಯಲ್ಲಿ ನಿಯಮ ನಿಬಂಧನೆಗಳನ್ನು ರಚಿಸಲಾಗುವುದು. ಸದರಿ ನಿಯಮ ನಿಬಂಧನೆಗಳಿಗೆ ತಿದ್ದುಪಡಿಯನ್ನು ಮಾಡುವ ಅವಶ್ಯಕತೆ ಇದ್ದರೆ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಿ, ಅನುಮೋದಿಸಲು ಅಥವಾ ದೃಢೀಕರಿಸಲು ಸರ್ವ ಸದಸ್ಯರ ಸಭೆಗೆ ಶಿಫಾರಸ್ಸು ಮಾಡಲಾಗುವುದು.

**6. ಕೇಂದ್ರದ ಸ್ವಾಧೀನಲ್ಲಿರುವ ವಿವಿಧ ರೀತಿಯ ದಾಖಲೆಗಳ ಬಗ್ಗೆ ವಿವರಣೆ :**

ಅಕಾಡೆಮಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದ ದಾಖಲೆಗಳಾದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಡತಗಳು, ನೇಮಕಾತಿ ಕಡತಗಳು, ಕಾರ್ಯಕಾರಿ ಸಮಿತಿಗಳ ಕಾರ್ಯಸೂಚಿ ಮತ್ತು ನಡವಳಿ, ಸರ್ಕಾರಿ ಆದೇಶಗಳು, ಸೂಚನೆಗಳು ಹಾಗೂ ಲೆಕ್ಕಪತ್ರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಛೇರಿಯಲ್ಲಿ ಸಂರಕ್ಷಿಸಿಡಲಾಗಿದೆ. ಅಲ್ಲದೇ, ಅಕಾಡೆಮಿಯು "ವಿಜ್ಞಾನ ಲೋಕ" ಎಂಬ ದ್ವೈಮಾಸಿಕ ಸಂಚಿಕೆಯನ್ನು ಪ್ರಕಟಿಸಲಾಗುತ್ತುದ್ದು, ವಿಜ್ಞಾನವನ್ನು ಜನಪ್ರಿಯಗೊಳಿಸಲು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳು, ಪ್ರಗತಿ ಮತ್ತು ಉಪಯುಕ್ತತೆಗಳ ಬಗ್ಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಜನಸಾಮಾನ್ಯರಿಗೆ ಅರಿವು ಮೂಡಿಸುವುದು ಇದರ ಉದ್ದೇಶ.

**7. ನೀತಿ, ನಿರೂಪಣೆ ಅಥವಾ ಕಾರ್ಯಕ್ರಮ ಅನುಷ್ಠಾನದಲ್ಲಿ ನಾಗರೀಕ ಪ್ರತಿನಿಧಿಗಳೊಡನೆ ಸಮಾಲೋಚಿಸುವ ಪ್ರತ್ಯೇಕ ವ್ಯವಸ್ಥೆ ಇದ್ದರೆ ವಿವರಿಸುವುದು.**

ನೀತಿ, ನಿರೂಪಣೆ ಅಥವಾ ಕಾರ್ಯಕ್ರಮ ಅನುಷ್ಠಾನದಲ್ಲಿ ನಾಗರೀಕ ಪ್ರತಿನಿಧಿಗಳೊಡನೆ ಸಮಾಲೋಚಿಸಿವ ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ. ಆದರೆ, ಕಛೇರಿಯ ವೇಳೆಯಲ್ಲಿ ಸದಸ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಸಲಹೆ ನೀಡಬಹುದು.

**8. ಕೇಂದ್ರದ ಅಂಗವಾಗಿ ಅಥವಾ ಸಲಹೆ ಸೂಚನೆಗಳನ್ನು ಪಡೆಯಲು ರಚಿತವಾದ ಎರಡು ಅಥವಾ ಹೆಚ್ಚಿನ ಸದಸ್ಯರನ್ನು ಹೊಂದಿರುವ ಮಂಡಳಿ, ಪರಿಷತ್, ಸಮಿತಿ ಮತ್ತು ಇತರೆ ಸಭೆಗಳ ವಿವರ ಹಾಗೂ ಅಂತಹ ಸಭೆಗಳು ಜನಸಾಮಾನ್ಯರಿಗೆ ಮುಕ್ತವಾಗಿದೆಯೆ ಅಥವಾ ಅವುಗಳ ಸಭೆಯ ನಿರ್ಣಯಗಳು ಜನಸಾಮಾನ್ಯರಿಗೆ ದೊರಕುವುದೇ ಎಂಬ ಬಗ್ಗೆ ವಿವರಣೆ.**

ಸರ್ವ ಸದಸ್ಯರ ಸಭೆಯ ಸದಸ್ಯರ ಪಟ್ಟಿಯನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ. ಕಾರ್ಯಕಾರಿ ಸಮಿತಿ ಮತ್ತು ಸರ್ವಸದಸ್ಯರ ಸಭೆಯ ನಿರ್ಣಯಗಳನ್ನು ಸದಸ್ಯರುಗಳಿಗೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಕಳುಹಿಸಿ ಕೊಡಲಾಗುತ್ತಿದೆ. ಅಲ್ಲದೇ, ಕಾರ್ಯಕಾರಿ ಸಮಿತಿಯು ನಿರ್ದಿಷ್ಟ ಕಾರ್ಯಯೋಜನೆ ಅಥವಾ ವಿಷಯಗಳನ್ನು ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಶಿಫಾರಸ್ಸು ಮಾಡುವ ಸಲುವಾಗಿ ಉಪ ಸಮಿತಿಗಳನ್ನು ರಚಿಸುವುದು. ಅಕಾಡೆಮಿಯ ವಿವಿಧ ಸಮಿತಿಯ ಸಭೆಗಳು ಜನಸಾಮಾನ್ಯರಿಗೆ ಮುಕ್ತವಾಗಿರುವುದಿಲ್ಲ ಮತ್ತು ಸಭೆಯ ನಡವಳಿಗಳು ಅವರಿಗೆ ದೊರಕುವುದಿಲ್ಲ.

**9. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರ :**

ಅಕಾಡೆಮಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

**10. ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿ ಪಡೆಯುತ್ತಿರುವ ಮಾಸಿಕ ವೇತನ ಹಾಗೂ ಅವರುಗಳಿಗೆ ನಿಯಮಾನುಸಾರ ನೀಡಬೇಕಾಗಿರುವ ಪರಿಹಾರಧನ ಇವುಗಳ ವಿವರ:**

ಅಕಾಡೆಮಿಯಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಗೆ ಮಾಸಿಕ ವೇತನವನ್ನು ಸರ್ಕಾರದ ವೇತನ ಶ್ರೇಣಿಗನುಗುಣವಾಗಿ, ಈ ಉದ್ದೇಶಕ್ಕಾಗಿ ರಚಿಸಿದ ಒಂದು ಉಪ ಸಮಿತಿಯ ಮೂಲಕ ಶೈಕ್ಷಣಿಕ

ವಿದ್ಯಾರ್ಹತೆ, ಹಿಂದಿನ ಅನುಭವ ಮತ್ತು ಸಂದರ್ಶನದಲ್ಲಿನ ನಿರ್ವಹಣೆ ಇವುಗಳ ಆಧಾರದ ಮೇಲೆ ನಿಗದಿಪಡಿಸಿದೆ. ಆನಂತರ ವಾರ್ಷಿಕ ಹೆಚ್ಚಳ ಮತ್ತು ಬಡ್ತಿಗಳನ್ನು ನೀಡಲು ಅಧಿಕಾರಿ/ಸಿಬ್ಬಂದಿಯ ಕಾರ್ಯನಿರ್ವಹಣೆ ಮತ್ತು ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು ಪರಿಗಣಿಸಲಾಗುವುದು. ನಿಯಮಾನುಸಾರ ಭವಿಷ್ಯನಿಧಿ ಮತ್ತು ಆರೋಗ್ಯವಿಮೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ವೇತನದ ವಿವರವನ್ನು ಅನುಬಂಧ – 3 ರಲ್ಲಿ ನೀಡಲಾಗಿದೆ.

**11. ಆಯವ್ಯಯದಲ್ಲಿ ತನ್ನ ಅಧೀನ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಅನುದಾನ, ಎಲ್ಲಾ ಯೋಜನೆಗಳ ವಿವರ, ಉದ್ದೇಶಿತ ಖರ್ಚುವೆಚ್ಚ ಮತ್ತು ಪಾವತಿಯ ವರದಿ**

ಅನ್ವಯಿಸುವುದಿಲ್ಲ

**12. ಸಹಾಯಾನುದಾನ ಯೋಜನೆ ಅನುಷ್ಠಾನ ಹಾಗೂ ಹಂಚಿಕೆ ಮಾಡಿದ ಹಣ ಮತ್ತು ಅಂತಹ ಯೋಜನೆಯ ಫಲಾನುಭವಿಗಳ ವಿವರ.**

ಅಕಾಡೆಮಿಯು ಮೂಲ ವಿಜ್ಞಾನ ಪದವಿಯ ವ್ಯಾಸಂಗಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ, ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಕನಿಷ್ಠಪಕ್ಷ ಶೇ. 70ಕ್ಕೂ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಬಿ.ಎಸ್.ಸಿ. ಪದವಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ (P.C.M.) ಅಥವಾ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ (C.B.Z.) ವಿಷಯಗಳನ್ನು ಆಯ್ಕೆ ಮಾಡಿಕೊಂಡು, ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅಂಕಗಳ ಆಧಾರದ ಮೇಲೆ ಮಾಹೆಯಾನ ರೂ. 1000/–ರಂತೆ ಹತ್ತು ತಿಂಗಳ ಅವಧಿಯವರೆಗೆ ಶಿಷ್ಯವೇತನವನ್ನು (ಪ್ರತಿ ವಿಶ್ವವಿದ್ಯಾನಿಲಯಕ್ಕೆ 20 ಶಿಷ್ಯವೇತನದಂತೆ) ನೀಡಲಾಗುವುದು. ಮೇಲ್ಕಂಡ ಶಿಷ್ಯವೇತನವನ್ನು, ಮುಂದಿನ ವರ್ಷಗಳಿಗೆ ಮುಂದುವರಿಸಬೇಕಾದರೆ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಶೇ 60 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಉತೀರ್ಣರಾಗಿರಬೇಕು.

**13. ರಿಯಾಯಿತಿ ಸ್ವೀಕರಿಸಿದವರ ವಿವರ, ಪರ್ಮಿಟ್ ಅಥವಾ ಪ್ರಮಾಣೀಕರಣ ಮಂಜೂರು ಮಾಡಿರುವ ಬಗ್ಗೆ**

ಅನ್ವಯಿಸುವುದಿಲ್ಲ

**14. ಕೇಂದ್ರದಲ್ಲಿ ಲಭ್ಯವಿರುವ ಮಾಹಿತಿ ಮತ್ತು ವಿದ್ಯುನ್ಮಾನ ರೂಪದಲ್ಲಿರಿಸಿರುವ ಮಾಹಿತಿಯ ಬಗ್ಗೆ ವಿವರ.**

ಯೋಜನಾ ಪ್ರಸ್ತಾವನೆ, ಅನುಷ್ಠಾನಗೊಳಿಸಿದ ಯೋಜನೆಗಳ ವಿವರ, ವರದಿಗಳು ಮತ್ತು ಅಧಿಕೃತ ಪತ್ರ ವ್ಯವಹಾರಗಳ ವಿವರವನ್ನು ಗಣಕೀಕರಿಸಲಾಗಿದೆ. ಅಕಾಡೆಮಿಯು ಅನುಷ್ಠಾನಗೊಳಿಸಿರುವ ಪರಿಯೋಜನೆಗಳ ಸಮಗ್ರ ಮಾಹಿತಿಯನ್ನು ಅಂತರ್‌ಜಾಲದ http://www.kstacademy.org ತಾಣದಲ್ಲಿ ಮಾಹಿತಿಗಳನ್ನು ಸುಲಭವಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅಳವಡಿಸಲಾಗಿದೆ.

**15. ನಾಗರೀಕರಿಗೆ ಮಾಹಿತಿ ಪಡೆಯಲು ಲಭ್ಯ ವ್ಯವಸ್ಥೆಯ ವಿವರ ಹಾಗೂ ಗ್ರಂಥಾಲಯ ಮತ್ತು ವಾಚನಾಲಯ ವ್ಯವಸ್ಥೆಯು ಜನಸಾಮಾನ್ಯರಿಗೆ ಲಭ್ಯವಿದ್ದರೆ, ಅವುಗಳ ಕೆಲಸದ ವೇಳೆಯನ್ನು ನೀಡುವುದು.**

ಅಕಾಡೆಮಿಗೆ ಸಂಬಂಧಿಸಿದ ಮಾಹಿತಿಯನ್ನು ಕಛೇರಿಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಗಳಿಂದ ಕಛೇರಿ ವೇಳೆ ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ (ಪ್ರತಿ ತಿಂಗಳ ಎರಡನೇ ಶನಿವಾರ ರಜಾ ದಿನವಾಗಿರುತ್ತದೆ) ಪಡೆಯಬಹುದು. ಅಕಾಡೆಮಿಯು ಗ್ರಂಥಾಲಯ ಮತ್ತು ವಾಚನಾಲಯ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ.

16. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು**

ಮುಖ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ :
ಡಾ|| ಹೆಚ್. ಹೊನ್ನೇಗೌಡ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ,
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ,
ವಿಜ್ಞಾನ ಭವನ, ನಂ 24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು – 560 070. ದೂರವಾಣಿ : 080 – 26712789
ಇಮೇಲ್ : ksta.gok@ gmail.com

17. **ನಿಗದಿ ಪಡಿಸಬಹುದಾದ ಇನ್ನಾವುದೇ ಮಾಹಿತಿಗಳನ್ನು ನಂತರದಲ್ಲಿ ಈ ಪ್ರಕಟಣೆಯನ್ನು ಆಗಿಂದಾಗ್ಗೆ ಆಧುನೀಕರಿಸಲಾಗುವುದು.**

**ಅನುಬಂಧ – 1**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸರ್ವಸದಸ್ಯರುಗಳ ಪಟ್ಟಿ

| ಕ್ರ.ಸಂ. | ಹೆಸರು ಮತ್ತು ವಿಳಾಸ | |
|---|---|---|
| 1 | ಪ್ರೊ. ಯು. ಆರ್. ರಾವ್<br>ನಿವೃತ್ತ ಅಧ್ಯಕ್ಷರು, ಇಸ್ರೋ, ಅಂತರಿಕ್ಷ ಭವನ, ನ್ಯೂ ಬಿ. ಇ. ಎಲ್. ರಸ್ತೆ, ಬೆಂಗಳೂರು–560 094 | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, 6ನೇ ಮಹಡಿ, 5ನೇ ಹಚಿತ, ಬಹುಮಹಡಿಗಳ ಕಟ್ಟಡ,<br>ಬೆಂಗಳೂರು–560 001. | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಆರ್ಥಿಕ ಇಲಾಖೆ, 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು–560 001. | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಉನ್ನತ ಶಿಕ್ಷಣ ಇಲಾಖೆ, ನಂ. 648, 6ನೇ ಮಹಡಿ, 2ನೇ ಹಂತ ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 | ಸದಸ್ಯರು |
| 5 | ನಿರ್ದೇಶಕರು,<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ)<br>ನಂ. 4, 100 ಅಡಿರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085 | ಸದಸ್ಯರು |
| 6 | ಪ್ರೊ. ಚಿದಾನಂದಗೌಡ<br>ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಉದಯರವಿ, 5ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ, ವಿ.ವಿ.ಪುರ, ಮೈಸೂರು – 570 002 | ಸದಸ್ಯರು |
| 7 | ಪ್ರೊ. ಕೆ. ಎಂ. ಕಾವೇರಿಯಪ್ಪ<br>ಸದಸ್ಯರು, ಕವಿತಂಅ, # ಃ–1, ಗಗನ ತಾರಾ, ಹೆಚ್. ಡಿ. ದೇವೇಗೌಡ ರಸ್ತೆ ಆರ್. ಟಿ. ನಗರ. ಬೆಂಗಳೂರು – 560032 | ಸದಸ್ಯರು |
| 8 | ಡಾ. ಪಿ. ಎಸ್. ಶಂಕರ್,<br>ಪ್ರೊಫೆಸರ್ ಆಫ್ ಮೆಡಿಸನ್, ದೀಪ್ತಿ ಜಿಲ್ಲಾಕೋರ್ಟ್ ಹಿಂಭಾಗ, ಗುಲ್ಬರ್ಗ | ಸದಸ್ಯರು |

| | | |
|---|---|---|
| 9 | ಪ್ರೊ. ರಾಮಲಿಂಗಯ್ಯ<br>ನಿರ್ದೇಶಕರು, ಪಿ.ಇ.ಟಿ. ವಿದ್ಯಾಸಂಸ್ಥೆ, ಶನಿಕೃಪಾ, ಕೆ.ಟಿ. 501, 4ನೇ ಕ್ರಾಸ್, ಚಾಮುಂಡೇಶ್ವರಿ ನಗರ, ಮಂಡ್ಯ-571 401. | ಸದಸ್ಯರು |
| 10 | ಪ್ರೊ. ಜಯಗೋಪಾಲ್ ಉಚ್ಚಿಲ್<br>ಬಿ-1579, ಆಕಾಂಕ್ಷೆ, ಸಹಕಾರ ನಗರ, ಬೆಂಗಳೂರು-560 092. | ಸದಸ್ಯರು |
| 11 | ಡಾ. ಎಂ. ಎನ್. ಮಧ್ಯಸ್ಥ<br>ನಿವೃತ್ತ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಪ್ರಶಾಂತ ನಗರ, ಡೆರೆಬೈಲ್ (Derebail) ಚರ್ಚ್ ಹಿಂಬಾಗ, ಮಂಗಳೂರು – 570 006 | ಸದಸ್ಯರು |
| 12 | ಪ್ರೊ. ಗೀತಾಬಾಲಿ<br>ವಿಶ್ರಾಂತ ಕುಲಪತಿಗಳು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ<br>ನಂ. 10, ಸ್ಟೆರ್ಲಿಂಗ್, ಸೌತ್ ಎಂಡ್ ಅಪಾರ್ಟ್ ಮೆಂಟ್, 30ನೇ ಕ್ರಾಸ್<br>ಜಯನಗರ 7ನೇ ಬ್ಲಾಕ್, ಬೆಂಗಳೂರು – 560082 | ಸದಸ್ಯರು |
| 13 | ಡಾ. ಎಸ್. ಕೆ. ಶಿವಕುಮಾರ್<br>ಡಾ. ವಿಕ್ರಂ ಸಾರಾಬಾಯಿ ಡಿಸ್ಟಿಂಗ್ವಿಷ್ಡ್ ಪ್ರೊಫೆಸರ್<br>ಇಸ್ರೋ ಸೆಟಲೈಟ್ ಸೆಂಟರ್ (ಐ.ಎಸ್.ಎ.ಸಿ.), ಅಂಚೆ ಪೆಟ್ಟಿಗೆ ಸಂಖ್ಯೆ: 1795, ವಿಮಾನಪುರ ಪೋಸ್ಟ್, ಬೆಂಗಳೂರು – 560017 | ಸದಸ್ಯರು |
| 14 | ಡಾ. ಎಚ್. ಎಸ್. ನಾಗರಾಜ<br>ನಂ 110, 4ನೇ 'ಎ' ಕ್ರಾಸ್, ರಾಮರಾವ್ ಲೇಔಟ್, ಕತ್ರಿಗುಪ್ಪೆ<br>ಬನಶಂಕರಿ 3ನೇ ಹಂತ, ಬೆಂಗಳೂರು – 560085 | ಸದಸ್ಯರು |
| 15 | ಪ್ರೊ. ಹಾಲ್ದೊಡ್ಡೇರಿ ಸುಧೀಂದ್ರ<br>ವಿಜ್ಞಾನ ಸಂವಹನಕಾರರು ಹಾಗೂ ಮಾಜಿ ವಿಜ್ಞಾನಿ, ಡಿ.ಆರ್.ಡಿ.ಓ.<br>ನಂ. 1499, ಸೌತ್ ಎಂಡ್ 'ಬಿ' ರೋಡ್, 9ನೇ ಬ್ಲಾಕ್<br>ಜಯನಗರ ಈಸ್ಟ್, ಬೆಂಗಳೂರು – 560069 | ಸದಸ್ಯರು |
| 16 | ಡಾ. ಸೈಯದ್ ಶಕೀಬ್ ಉರ್ ರಹಮಾನ್<br>#140, 6ನೇ ಮುಖ್ಯರಸ್ತೆ, ಸುಭಾಸ್ ನಗರ, ಮೈಸೂರು – 570 007 | ಸದಸ್ಯರು |
| 17 | ಡಾ. ವಸುಂಧರಾ ಭೂಪತಿ<br>ನಂ. 222, 2ನೇ ಇ ಅಡ್ಡ ರಸ್ತೆ, 3ನೇ ಹಂತ, 3ನೇ ಬ್ಲಾಕ್<br>ಬಸವೇಶ್ವರನಗರ, ಬೆಂಗಳೂರು –570 079 | ಸದಸ್ಯರು |
| 18 | ಪ್ರೊ. ಕೆ. ಎಸ್. ನಟರಾಜ್<br>ಸುಕೃತ, ನಂ. 1246, 2ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಜೆ. ಪಿ. ನಗರ, 2ನೇ ಹಂತ, ಬೆಂಗಳೂರು – 560078 | ಸದಸ್ಯರು |
| 19 | ಡಾ. ಸಂಗಮೇಶ್ ಎ ಪಾಟೀಲ್<br>ಕುಲಸಚಿವರು (ಮೌಲ್ಯಮಾಪನ)<br>ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ – 583101 | ಸದಸ್ಯರು |
| 20 | ಶ್ರೀ ಸ. ರ. ಸುದರ್ಶನ<br>ನಿವೃತ್ತ ಉಪ ನಿರ್ದೇಶಕರು, 519/1, ವೈಭವಿ, ಕುವೆಂಪು ನಗರ, 3ನೇ ಅಡ್ಡ ರಸ್ತೆ, ತೊಣಚಿಕೊಪ್ಪಲು ಬಡಾವಣೆ, ಮೈಸೂರು –570 009 | ಸದಸ್ಯರು |
| 21 | ಡಾ. ಹೆಚ್. ಹೊನ್ನೇಗೌಡ<br>ವಿಶೇಷ ನಿರ್ದೇಶಕರು (ತಾಂತ್ರಿಕ)<br>ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ವಿಜ್ಞಾನ ಭವನ, ನಂ. 24/2 ಮತ್ತು 24/3, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ<br>ಬೆಂಗಳೂರು-560 070. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ |

**ಅನುಬಂಧ – 2**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಿಬ್ಬಂದಿಗಳ ವಿವರ

1. ಡಾ. ಹೆಚ್. ಹೊನ್ನೇಗೌಡ
   ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ
   ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕ.ವಿ.ತಂ.ಅ.
2. ಡಾ. ಎ.ಎಂ. ರಮೇಶ್, ವೈಜ್ಞಾನಿಕ ಅಧಿಕಾರಿ–III
3. ಡಾ. ಆನಂದ್ ಆರ್., ವೈಜ್ಞಾನಿಕ ಅಧಿಕಾರಿ–II
4. ಶ್ರೀ ವಿ.ಕೆ. ಶ್ರೀನಿವಾಸು, ವೈಜ್ಞಾನಿಕ ಅಧಿಕಾರಿ–I
5. ಶ್ರೀ ಉಮೇಶ್ ಜಿ. ಗಾಟಿಗೆ, ವೈಜ್ಞಾನಿಕ ಅಧಿಕಾರಿ–I
6. ಶ್ರೀ ಮಹದೇವೇಗೌಡ, ಆಡಳಿತಾಧಿಕಾರಿ.
7. ಶ್ರೀ. ಹೆಚ್. ವಿ. ಹೊನ್ನೇಗೌಡ, ಲೆಕ್ಕ ಅಧೀಕ್ಷಕ
8. ಶ್ರೀ ದಿಲೀಪ್, ಕಛೇರಿ ಅಧೀಕ್ಷಕ
9. ಕು. ಲೀಲು, ಆಪ್ತ ಸಹಾಯಕಿ
10. ಶ್ರೀ ಪಾಂಡುರಂಗ, ಶೀಘ್ರಲಿಪಿಗಾರ
11. ಶ್ರೀ. ಚಂದ್ರಶೇಖರಮೂರ್ತಿ ಎಸ್., ಕಿರಿಯ ಸಹಾಯಕ
12. ಶ್ರೀ. ಉಮೇಶ್ ಕೆ.ಸಿ., ಕಿರಿಯ ಸಹಾಯಕ
13. ಗೋಪಾಲಯ್ಯ, ಚಾಲಕ
14. ಕೆ.ಸಿ. ರಮೇಶ್, ಚಾಲಕ
15. ಭರತ್, ದಲಾಯತ್
16. ಶ್ರೀ ಮೋಹನ್, ಮೆಸೆಂಜರ್
17. ಶ್ರೀಮತಿ ಲಲಿತ

**ಅನುಬಂಧ – 3**

**ಅಕಾಡೆಮಿಯ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿರುವ ಮಾಸಿಕ ವೇತನದ ವಿವರ.**

| ಕ್ರ. ಸಂ. | ಪದನಾಮ | ವೇತನ ಶ್ರೇಣಿ |
|---|---|---|
| 1. | ವೈಜ್ಞಾನಿಕಾಧಿಕಾರಿ–III | 40,050 ರಿಂದ 56,550 |
| 2. | ವೈಜ್ಞಾನಿಕಾಧಿಕಾರಿ–II | 36,300 ರಿಂದ 53,850 |
| 3 | ವೈಜ್ಞಾನಿಕಾಧಿಕಾರಿ–I | 36,300 ರಿಂದ 53,850 |
| 4. | ಆಡಳಿತಾಧಿಕಾರಿ | 30,400 ರಿಂದ 51,300 |
| 5. | ಲೆಕ್ಕ ಅಧೀಕ್ಷಕ | 22,800 ರಿಂದ 43,200 |
| 6. | ಕಛೇರಿ ಅಧೀಕ್ಷಕ | 20,000 ರಿಂದ 36,300 |
| 7. | ಆಪ್ತ ಸಹಾಯಕಿ | 16,000 ರಿಂದ 29,600 |
| 8. | ಶೀಘ್ರಲಿಪಿಗಾರ | 12,500 ಣಂ 24,000 |
| 9. | ಕಿರಿಯ ಸಹಾಯಕ | 11,600 ರಿಂದ 21,000 |
| 10. | ಚಾಲಕ | 11,600 ರಿಂದ 21,000 |
| 11. | ದಲಾಯತ್ | 10,400 ರಿಂದ 16,400 |
| 12 | ಮೆಸೆಂಜರ್ | 9,600 ರಿಂದ 14,550 |
| 13 | ಸ್ವಚ್ಛತಾಕಾರ್ಯ | 8,000 |

ಭತ್ಯೆ ಮತ್ತಿತರ ಪಾವತಿಗಳು ಸರ್ಕಾರದ ನಿಯಮಾನುಸಾರ ಆಯಾ ಹುದ್ದೆಗಳಿಗೆ ಅನ್ವಯವಾಗುವಂತೆ ಇರುತ್ತವೆ.